ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಸಚಿವರು ಕೊಟ್ಟಿರುವ ಅಭಿಪ್ರಾಯ ಸರಿಯಿಲ್ಲ ಈ ಸಿ.ಆಂಡ್. ಡಿಲ್ಯಾಂಡ್ ಫಾರೆಸ್ಟ್ ಲ್ಯಾಂಡ್ ಆಗಂವುದಿಲ್ಲ. ಫಾರೆಸ್ಟ್ ಲ್ಯಾಂಡ್ ಏನು ಎನ್ನುವುದನ್ನು ನೋಟಿಫಿಕೇಷನ್ ಮಾಡಿದ್ದಾರೆ. ಅದನ್ನು ಪುನಃ ಮುಂಡಲ್ ಪಂಚಾಯತ್‌ಗೆ ಕೊಡಬೇಕಾದ ಸಂದರ್ಭ ಬರುತ್ತದೆ. ಮಾನ್ಯ ಸದಸ್ಯರು ಈಗ ಏನು ಹೇಳಿದರು, ಅದು ಸ್ತುತ್ಯಾರ್ಹವಾದ ಸಲಹೆ. ನಮಗೆ ಈ ಗೋಮಾಳ ಬಿಟ್ಟು ಬೇರೆ ಭೂಮಿ ಇಲ್ಲ. ಇದನ್ನೂ ಕೂಡ ಅರಣ್ಯ ಇಲಾಖೆಗೆ ಹಾಂಡ್ ಓವರ್ ಮಾಡಿಬಿಟ್ಟರೆ ಗೋವುಗಳಿಗೆ ಮೇಯಲಿಕ್ಕೆ ಜಮೀನು ಇರುವುದಿಲ್ಲ. ಇದನ್ನು ದಯವಿಟ್ಟು ತಪ್ಪಿಸುತ್ತೀರಾ ? ಅಲ್ಲದೆ ನಾವೀಗ ಹೈನುಗಾರಿಕೆ ಕಡೆಗೆ ಹೆಚ್ಚು ಗಮನ ಕೊಡುತ್ತಿದ್ದೇವೆ. ಆದ್ದರಿಂದ ಈ ಹಂಗಾಮು ಸಾಗುವಳಿದಾರರು ಏನಿದ್ದಾರೆ ಅವರ ಜಮೀನನ್ನು ವಶಪಡಿಸಿಕೊಳ್ಳದ ಹಾಗೆ ಆದೇಶವನ್ನು ಕೊಡುತ್ತೀರಾ ?

ಶ್ರೀ ಎಸ್.ಆರ್. ಬೊಮ್ಮಾಯಿ.—೧೯೮೨ರಲ್ಲಿ ೨೫ ಲಕ್ಷ ಎಕರೆ ಸಿ ಆಂಡ್ ಡಿ ಜಮೀನು ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ಪರ್ಗಾವಣೆ ಆಗಿದೆ. ಈ ಪರ್ಗಾವಣೆ ಮಾಡಲು ಮುಂಚೆ ನಂತರ ಕೆಲವು ಒತ್ತುವರಿ ಪ್ರಕರಣಗಳು ನಡೆದಿವೆ. ಇದು ಸರ್ಕಾರದ ಗಮನಕ್ಕೆ ಬಂದಿದೆ. ಇಲ್ಲಿ ಕಾನೂನಿನ ತೊಡಕು ಇದೆ. ಒಮ್ಮೆ ಟ್ರಾನ್ಸ್‌ಫರ್ ಮಾಡಿಬಿಟ್ಟರೆ ಪುನಃ ಪಡೆಯಬೇಕಾದರೆ ಕೇಂದ್ರಸರ್ಕಾರದ ಅಪ್ಪಣೆ ಬೇಕಾಗುತ್ತದೆ. ಇವನ್ನು ನಾನು ವಿಪರವಾಗಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಈಗ ಇದು ಸೆಲೆಕ್ಟ್ ಕಮಿಟಿ ಮುಂದೆ ಇದೆ. ಅಲ್ಲಿ ಇದು ಪರಿಶೀಲನೆಯಾಗುತ್ತಿದೆ.

ಅಧ್ಯಕ್ಷರು.—ಶ್ರೀ ಜೆ. ರಾಜುಗೌಡ ಅವರ ಪ್ರಶ್ನೆ (ಸಂಖ್ಯೆ.೩೮೮)ಯನ್ನು ಮುಂದೂಡಲಾಗಿದೆ.

ಪ್ರಶ್ನೆ ಸಂಖ್ಯೆ. ೪೪೪

ಮಾನ್ಯ ಸದಸ್ಯರಾದ ಶ್ರೀ ಚಂದ್ರಕಾಂತ ಬೆಲ್ಲದ ಅವರು ಗೈರುಹಾಜರಿ

ಪ್ರಶ್ನೆ ಸಂಖ್ಯೆ. ೧೩೫

ಮಾನ್ಯ ಸದಸ್ಯೆಯಾದ ಶ್ರೀಮತಿ ಮುಮ್ತಾಜ್‌ಬೇಗಂ ಅವರು ಗೈರುಹಾಜರಿ

ಅಧ್ಯಕ್ಷರು.—ಶ್ರೀ ಬಿ. ಬಸವಲಿಂಗಪ್ಪ ಅವರ ಪ್ರಶ್ನೆ (ಸಂಖ್ಯೆ ೪೪೧)ಮತ್ತು ಶ್ರೀ ವೇದಾಂತ ಹೆಬ್ಬಾರ್ ಅವರ ಪ್ರಶ್ನೆ (ಸಂಖ್ಯೆ ೨೯)ಗಳನ್ನು ಮುಂದೂಡಲಾಗಿದೆ.

ಪ್ರಶ್ನೆ ಸಂಖ್ಯೆ. ೫೧೦

ಮಾನ್ಯ ಸದಸ್ಯರಾದ ಶ್ರೀ ಪಿ.ಸಿ. ಸಿದ್ದನಗೌಡ ಅವರು ಗೈರುಹಾಜರಿದ್ದರು.

ಅಧ್ಯಕ್ಷರು.—ಈಗ ಗೈರುಹಾಜರಿದ್ದ ಸದಸ್ಯರ ಹೆಸರುಗಳನ್ನು ಮತ್ತೊಮ್ಮೆ ಕರೆಯುತ್ತೇನೆ.

ಹೊನ್ನಾಳ್ಳಿ ತಾಲ್ಲೂಕಿನಲ್ಲಿ ಬರಗಾಲ

೧೦೩. (೪೧೩) ಶ್ರೀ ಡಿ. ಬಿ. ಬಸವನಗೌಡ(ಹೊನ್ನಾಳ್ಳಿ).—ಮಾನ್ಯ ಕಂಧಾಯ ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ೧೯೮೫-೮೬ರಲ್ಲಿ ಹೊನ್ನಾಳ್ಳಿ ತಾಲ್ಲೂಕಿನ ಸುಮಾರು ೬೫ ಹಳ್ಳಿಗಳು ಬರಗಾಲದ ಶಿಪ್ಪು ದವಡೆಗೆ ಸಿಕ್ಕ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿನ್ನಲ್ಲಿ, ರೈತರಿಗೆ ಪರಿಹಾರ ಒದಗಿಸುವಲ್ಲಿ ಸರ್ಕಾರದವರು ಇದುವರೆಗೆ ಯಾವ ಕ್ರಮ ಕೈಗೊಂಡಿದ್ದಾರೆ?

ಇ) ಅಭಾವ ಪರಿಹಾರ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಇದುವರೆವಿಗೂ ಯೋಚಿಸದಿರಲು ಕಾರಣವೇನು ?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಯೋಜನಾಹಾಗೂ ಕಾರ್ಮಿಕ ಮಂತ್ರಿಯವರು).—

ಅ) ಬಂದಿದೆ.

ಆ) ಉದ್ಯೋಗ ಕೋರಿ ಬಂದವರಿಗೆ ರೈತರನ್ನು ಪೊದಲ್ಗೊಂಡು, ಉದ್ಯೋಗ ಕಲ್ಪಿಸುವುದು ಕಂಡಿಯಂತೆ ನೀರು ಸರಬರಾಜು, ಜಾನುವಾರುಗಳಿಗೆ ಮೇವನ್ನು ಒದಗಿಸುವುದು, ಮಕ್ಕಳ ಹಾಗೂ ತಾಯಂದಿರಿಗೆ ಪೌಷ್ಟಿಕ ಆಹಾರವನ್ನು ಒದಗಿಸುವುದು ಮುಂತಾದ ಕಾರ್ಯಕ್ರಮಗಳನ್ನು ಅಭಾವ ಪರಿಹಾರಾರ್ಥವಾಗಿ ಕೈಗೊಳ್ಳಲಾಗಿದೆ.

ಇ) ಪ್ರಶ್ನೆ (ಆ) ಗೆ ನೀಡಿದ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದಂತೆ ಸುಮಾರು ೧೩೬ ಹಳ್ಳಿಗಳಲ್ಲಿ ಬರಗಾಲ ಪರಿಸ್ಥಿತಿ ಇತ್ತು. ೫೨ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಹೊನ್ನಾಳ್ಳಿ ತಾಲ್ಲೂಕಿನಲ್ಲಿ ೧೪೮ ಕೆಲಸಗಳನ್ನು ತೆಗೆದುಕೊಂಡಿದ್ದೇವೆ. ಅದರಲ್ಲಿ ೧೧೧ ಮುಗಿದಿದೆ. ಮತ್ತು ೫೨೫ ಕೊಳವೆಬಾವಿಗಳನ್ನು ತೆಗೆದಿದ್ದೇವೆ. ಈ ರೀತಿ ಕಾರ್ಯಕ್ರಮಗಳನ್ನು ಹೋದವರ್ಷ ಮಾಡಲಾಗಿದೆ.

ಶ್ರೀ ಡಿ. ಬಿ. ಬಸವನಗೌಡ.—ಮಾನ್ಯ ಸಚಿವರು ಹೇಳಿದ್ದನ್ನು ನಾನು ಒಪ್ಪುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಸತತವಾಗಿ ನಾಲ್ಕು ವರ್ಷಗಳ ಕಾಲ ಬರಗಾಲ ಬಂತು. ಸುಮಾರು ೬೫ ಹಳ್ಳಿಗಳಿಂದ ಮುಕ್ಕಾಲು ಭಾಗ ಜನರನ್ನು ಜಿಲ್ಲಾ ಪೆರಿಷತ್ತು ಮತ್ತು ಮಂಡಲ ಪಂಚಾಯಿತಿಗೆ ಕರೆದುಕೊಂಡು ಬರಬೇಕಾದರೆ ಕಷ್ಟವಾಯಿತು. ನೀವೇನೋ ಕಳಸವನ್ನೇ ತಂದು ಇಳಿಸುತ್ತೇವೆಂದು ಭರವಸೆ ಕೊಟ್ಟಿದ್ದೀರಿ. ಆದರೆ ಜನರು ನಮ್ಮನ್ನು ಬಯ್ಯುತ್ತಿದ್ದಾರೆ. ಕಂದಾಯ ಸಚಿವರು ೬೫ ಹಳ್ಳಿಗಳಿಗೆ ಕಾಮಗಾರಿ ಮಾಡುತ್ತಿಲ್ಲ. ಲೋಕೋಪಯೋಗಿ ಇಲಾಖೆಯ ಮೂಲಕವೂ ಕೆಲಸ ಆಗುತ್ತಿಲ್ಲ. ಆದ್ದರಿಂದ ಈಗಲಾದರೂ ಜಿಲ್ಲಾಧಿಕಾರಿಗಳ ಮೂಲಕ ಕೆಲಸ ಒದಗಿಸಿ ಕೊಟ್ಟರೆ ಒಳ್ಳೆಯದೆಂದು ನಾನು ಸಲಹೆ ಮಾಡುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅದನ್ನು ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರು.—ಮಾಪಮನಿಯವರೆ, ನಿಮ್ಮ ಪ್ರಶ್ನೆ ಮುಂದಕ್ಕೆ ಹೋಗಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸದಸ್ಯರು ಹಾಜರಿರಲಿಲ್ಲ.

ಶ್ರೀ ಸಿ. ಜಿ. ಬೆಲ್ಲದ್.—ಸದಸ್ಯರು ಹಾಜರಿರಲಿಲ್ಲ,

ಶ್ರೀಮತಿ ಮುಸ್ತರುನ್ನಿಸಾ.—ಸದಸ್ಯರು ಹಾಜರಿರಲಿಲ್ಲ.

ಶ್ರೀ ಸಿದ್ದನಗೌಡ.—ಸದಸ್ಯರು ಹಾಜರಿರಲಿಲ್ಲ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಶಿಕಾರಿಪುರದಲ್ಲಿ ತಾಲ್ಲೂಕು ಕಛೇರಿ ಕಟ್ಟಡದ ನಿರ್ಮಾಣ

೧೦೯(೨೦೬) ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) ಮಾನ್ಯ ಕಂದಾಯ ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ.—

ಅ) ಶಿಕಾರಿಪುರ ನಗರದಲ್ಲಿರುವ ತಾಲ್ಲೂಕ್ ಕಛೇರಿ ಕಟ್ಟಡ ನಿರ್ಮಿಸಿ ೧೦೦ ವರ್ಷಕ್ಕೂ ಮೇಲಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಈಗಾಗಲೆ ಈ ಕಟ್ಟಡ ಸಂಪೂರ್ಣ ಶಿಥಿಲವಾಗಿ ಬೀಳುವ ಸ್ಥಿತಿಯಲ್ಲಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಹೊಸ ಕಟ್ಟಡ ನಿರ್ಮಿಸುವ ಬಗ್ಗೆ ಸರ್ಕಾರದವರು ಏನಾದರೂ ಯೋಚಿಸಿದ್ದಾರೆಯೇ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಯೋಜನಾ ಹಾಗೂ ಕಾರ್ಮಿಕ ಸಚಿವರು).—

ಅ) ಹೌದು.

ಆ) ಇಲ್ಲ.

ಇ) ಇಲ್ಲ.

ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ಪಣ ಬಿಡುಗಡೆ ಮಾಡಿರುವ ಬಗ್ಗೆ

೧೧೪(೧೩೫) ಶ್ರೀಮತಿ ಮುಮ್ತಾರುನ್ನೀಸ (ನರಸಿಂಹರಾಜ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದೆಯೆಯಿಟ್ಟು ಉತ್ತರಿಸುವರೆ::—

ಅ) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ಗೊತ್ತುಪಡಿಸಿರುವ ಒಟ್ಟು ಮೊತ್ತ (ಆಯವ್ಯಯ) ?